# ಮಾಸ ಭವಿಷ್ಯ

-ಅರುಣ ಪಿ. ಭಟ್



**ಮೇಷ:** ನಿಮ್ಮ ವೃತ್ತಿಜೀವನದಲ್ಲಿ ನೀವು ಅಡೆತಡೆಗಳನ್ನು ಎದುರಿಸಬೇಕಾಗಬಹುದು. ತಿಂಗಳ ಮೊದಲ ಭಾಗದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಿಮಗೆ, ನಿಮ್ಮ ಪರಿವಾರಕ್ಕೆ ಶುಭ. ನಿಮ್ಮ ಆದಾಯದ ಜತೆಗೆ ಖರ್ಚುಗಳೂ ಹೆಚ್ಚಾಗಬಹುದು. **ಶುಭ:** 12,18,27. **ಅಶುಭ:** 9,13,25.

**ವೃಷಭ:** ಕಲಾವಿದರಿಗೆ, ಸಂಗೀತಗಾರರಿಗೆ ಉತ್ತಮ ಅವಕಾಶ ಬರುವುದು. ಸರ್ಕಾರಿ ಕೆಲಸಗಳಲ್ಲಿ ಯಶಸ್ಸು. ಮನೆ ಕೊಳ್ಳುವ ಯೋಗವಿದೆ. ಸೋದರ, ಸೋದರಿಯರ ಮನಸ್ತಾಪ ಸುಖಾಂತ್ಯವಾಗಲಿದೆ. ವಿವಾಹಿತರಿಗೆ ವಿವಾಹದ ಸೂಚನೆ. ವಿದ್ಯಾರ್ಥಿಗಳಿಗೆ ಶುಭ. **ಶುಭ:** 14,22,26. **ಅಶುಭ:** 8,12,23.





**ಮಿಥುನ:** ವ್ಯಾಪಾರಿಗಳಿಗೆ ಉತ್ತಮ ಸಮಯ. ಸರ್ಕಾರಿ ಉದ್ಯೋಗಿಗಳಿಗೆ ಮೇಲಧಿಕಾರಿಗಳಿಂದ ಒತ್ತಡ. ಮಕ್ಕಳ ವಿದ್ಯಾಭ್ಯಾಸದಲ್ಲಿ ಸ್ವಲ್ಪ ಹಿನ್ನಡೆ. ವಾಹನ ಖರೀದಿ ಯೋಗವಿದೆ. ಆರೋಗ್ಯದ ಬಗ್ಗೆ ಕಾಳಜಿ ಇರಲಿ. ಸಂತುಷ್ಟರಾಗುವಿರಿ. ಆರ್ಥಿಕ ಸ್ಥಿತಿ ಉತ್ತಮವಾಗಿರುತ್ತದೆ. **ಶುಭ:** 11,15,21. **ಅಶುಭ:** 12,16,29.

**ಕರ್ಕ:** ನೆರೆಹೊರೆಯವರಿಂದ ಉತ್ತಮ ಸಹಕಾರ. ಮನೆಯಲ್ಲಿ ಮಂಗಳ ಕಾರ್ಯ ನಡೆಸುವಿರಿ. ಆರ್ಥಿಕವಾಗಿ ಉತ್ತಮ ತಿಂಗಳು. ರಾಜಕೀಯದಲ್ಲಿರುವವರಿಗೆ ಉತ್ತಮ ಫಲಿತಾಂಶ. ವಾಣಿಜ್ಯ ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಶುಭ. **ಶುಭ:** 14,18,26. **ಅಶುಭ:** 12,19,22.





**ಸಿಂಹ:** ಹತ್ತಿರದ ಬಂಧುಗಳಿಗೆ ನಿಮ್ಮ ಸಹಾಯದ ಅವಶ್ಯಕತೆ ಬರುವುದು. ಉದ್ಯೋಗದಲ್ಲಿ ಮೇಲಧಿಕಾರಿಗಳಿಂದ ತೊಂದರೆ. ಅವಿವಾಹಿತರಿಗೆ ವಿವಾಹ ಭಾಗ್ಯ. ವಾಹನ ಖರೀದಿಗೆ ಉತ್ತಮ ಅವಕಾಶ ತಿಂಗಳ ಕೊನೆಯಲ್ಲಿ ಸಣ್ಣ ಪ್ರವಾಸ. **ಶುಭ:** 14,18,22. **ಅಶುಭ:** 16,23,28.

**ಕನ್ಯಾ:** ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಪ್ರಗತಿ. ಆರೋಗ್ಯವು ಉತ್ತಮವಾಗಿ ಇರುತ್ತದೆ. ಹೆಚ್ಚು ಉತ್ಸಾಹ ಹಾಗೂ ಸಂತೋಷದಿಂದ ಕಾಣಿಸಿಕೊಳ್ಳುತ್ತೀರಿ. ತಿಂಗಳ ಕೊನೆಗೆ ವ್ಯಾಪಾರ, ವ್ಯವಹಾರ ಲಾಭದಾಯಕವಾಗಿ ಇರುತ್ತದೆ. ಸಂಗಾತಿಗೆ ಉಡುಗೊರೆ ನೀಡುವ ಸಾಧ್ಯತೆ ಇದೆ. **ಶುಭ:** 16,20,28. **ಅಶುಭ:** 13,23,26.





**ತುಲಾ:** ವ್ಯಾಪಾರಸ್ಥರಿಗೆ ಲಾಭ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವ ಸಾಧ್ಯತೆ. ಸಂತತಿ ಇಲ್ಲದವರಿಗೆ ಸಂತತಿಯ ಸೂಚನೆ. ಕುಟುಂಬ ಸೌಖ್ಯ. ಮನೆಗೆ ಹೊಸ ಪೀಠೋಪಕರಣ, ಅಲಂಕಾರಿಕ ವಸ್ತು ಖರೀದಿ ಸಾಧ್ಯತೆ. ಒಟ್ಟಾರೆಯಾಗಿ ಶುಭ. **ಶುಭ:** 12,14,28. **ಅಶುಭ:** 13,19,27.

**ವೃಶ್ಚಿಕ:** ಈಗ ಮಾಡುತ್ತಿರುವುದಕ್ಕಿಂತ ಉತ್ತಮವಾಗಿ ಕೆಲಸ ಮಾಡಲು ಪ್ರಯತ್ನಿಸುತ್ತೀರಿ. ಹಲವು ಸವಾಲುಗಳು ಏಕಕಾಲಕ್ಕೆ ಎದುರಾಗುತ್ತದೆ. ಆರೋಗ್ಯ ಸಮಸ್ಯೆ ಕಾಡಬಹುದು. ಹಣಕಾಸಿನ ವೆಚ್ಚ ಹೆಚ್ಚಾಗಲಿದೆ. **ಶುಭ:** 10,14,22. **ಅಶುಭ:** 12,16,23.





**ಧನು:** ಗುರುಹಿರಿಯರ ಆಶೀರ್ವಾದ ಪಡೆದು ಮಹತ್ವದ ನಿರ್ಣಯ ತೆಗೆದುಕೊಳ್ಳಿ. ಆರೋಗ್ಯದಲ್ಲಿ ಸ್ವಲ್ಪಮಟ್ಟಿಗೆ ಕಿರಿಕಿರಿ. ಅಗ್ನಿಯಿಂದ ಅವಘಡ ಸಾಧ್ಯತೆ, ಎಚ್ಚರಿಕೆಯಿಂದ ಇರಿ. ಹಳೆಯ ಕೋರ್ಟ್ ಕಾನೂನು ಪ್ರಕರಣಗಳಿದ್ದಲ್ಲಿ ಪರಿಹಾರವಾಗಲಿವೆ.  **ಶುಭ:** 12,19,28. **ಅಶುಭ:** 10,16,24.

**ಮಕರ:** ಆರ್ಥಿಕವಾಗಿ ಸುಭದ್ರವಾಗುವಿರಿ. ಹಳೇಸಾಲ ತೀರಿಸುವಿರಿ. ನಿಮ್ಮ ವಿರೋಧಿಗಳ ಆಟ ನಿಮ್ಮ ಮುಂದೆ ನಡೆಯದು. ಸರ್ಕಾರದ ಕೆಲಸಗಳು ಅಡೆತಡೆ ಇಲ್ಲದೆ ನಡೆಯುವುದು. ಪಿತ್ರಾರ್ಜಿತ ಆಸ್ತಿ ವಿವಾದ ಇತ್ಯರ್ಥ. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು. **ಶುಭ:** 16,23,26. **ಅಶುಭ:** 14,18,22.





**ಕುಂಭ:** ಅಸ್ಥಿರವಾದ ಮನಸ್ಸಿಂದ ಗೊಂದಲವಾಗುವುದು. ಸರ್ಕಾರಿ, ಕೋರ್ಟ್ ಕಾರ್ಯಗಳಲ್ಲಿ ಅಡೆತಡೆ ಉಂಟಾಗುವುದು. ವೈವಾಹಿಕ ಸಂಬಂಧಗಳು ಹದಗೆಡುವ ಪ್ರಸಂಗ. ಆಡುವ ಮಾತಿನ ಮೇಲೆ ನಿಗಾ ವಹಿಸಿ. ತಿಂಗಳ ಕೊನೆಗೆ ಮಕ್ಕಳಿಂದ ಶುಭ ಸುದ್ದಿ. ಆರೋಗ್ಯ ಚೇತರಿಕೆ. **ಶುಭ:** 16,24,28. **ಅಶುಭ:**17,20,27.

**ಮೀನ:** ಪ್ರೀತಿಪಾತ್ರರೊಂದಿಗೆ ಉತ್ತಮ ಸಮಯ ಕಳೆಯಲಿದ್ದೀರಿ. ಸೋದರ–ಸೋದರಿಯರ ಬಾಂಧವ್ಯ ಗಟ್ಟಿಯಾಗಲಿದೆ. ಹೆಸರಾಂತ ಸಂಸ್ಥೆಯೊಂದರಲ್ಲಿ ಉದ್ಯೋಗ ದೊರೆಯುವ ಅವಕಾಶ ಇದೆ. ಪದೋನ್ನತಿ ಸಿಗುವ ಯೋಗ ಇದೆ.  ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. **ಶುಭ:** 18,25,29. **ಅಶುಭ:** 12,16,26.

